**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಬಂಗಾರಪೇಟೆ**

**ಸಿಸಿ ಸಂಖ್ಯೆ 388/2019** **CW-3** **PW-7**

**ಸಾಕ್ಷಿಯನ್ನು ದಿಃ 05.04.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರುಃ ಅಮರೇಶ್**

**ತಂದೆ ಹೆಸರುಃ ಚಿನ್ನಪ್ಪ**

**ವಯಸ್ಸುಃ 38**

**ವೃತ್ತಿಃ ಪೋಟೋ ಗ್ರಾಫರ್**

**ವಾಸ ಸ್ಥಳಃ ಮರಗಲ್, ಬಂಗಾರಪೇಟೆ**

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಸುಮಾರು 10 ವರ್ಷಗಳಿಂದ ವಿಡಿಯೋ ಮತ್ತು ಪೋಟೋ ಗ್ರಾಫರ್ ಕೆಲಸ ಮಾಡುತ್ತೇನೆ. 2018 ರ ವಿಧಾನ ಸಭಾ ಚುನಾವಣೆಗೆ ಸರ್ಕಾರಿ ಅಧಿಕಾರಿಗಳ ಒಂದು ತಂಡ ರಚಿಸಿದ್ದು ಅವರ ಜೊತೆ ನನ್ನನ್ನು ವಿಡಿಯೋ ಮಾಡಲು ನೇಮಕ ಮಾಡಿದ್ದರು. ಬಂಗಾರಪೇಟೆ- ಕೋಲಾರ ಮುಖ್ಯ ರಸ್ತೆಯ ಬೀರಾಂಡಹಳ್ಳಿ ಕ್ರಾಸ್ ಬಳಿ ಹತ್ತಿರ ಒಂದು ಟೆಂಪೋ ಬಿದ್ದು ಹೋಗಿದ್ದು ಅಲ್ಲಿ ಹೋಗಿ ನೋಡಿದಾಗ ಅದರಲ್ಲಿ ಅಕ್ಕಿ ಮೂಟೆಗಳು ಇರುವುದು ಕಂಡು ಬಂದಿತ್ತು. ಈ ಸಂಬಂಧ ವಿಡಿಯೋ ಮಾಡಲು ಚಾಸಾ-1 ರವರು ಸೂಚಿಸಿದರು ಅದರಂತೆ ನಾನು ವಿಡಿಯೋ ಚಿತ್ರೀಕರಣ ಮಾಡಿ ಅದರ ಸಿ.ಡಿ. ಯನ್ನು ತಯಾರಿಸಿ ಕೊಟ್ಟಿರುತ್ತೇನೆ. ಸಿ.ಡಿ.ಯನ್ನು ಪೋಲೀಸರು ಪಡೆದ ಬಗ್ಗೆ ಈಗ ತೋರಿಸಿದ ಪಂಚನಾಮೆಗೆ ಸಹಿ ಪಡೆದಿರುತ್ತಾರೆ ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ಸದರಿ ಸಿ.ಡಿ.ಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಟೆಂಪೋ ಚಾಲಕ ಸದರಿ ಸ್ಥಳದಲ್ಲಿ ಇರಲಿಲ್ಲ. ಚುನಾವಣೆ ಇದ್ದ ಪ್ರಯುಕ್ತ ಸದರಿ ಅಕ್ಕಿಯನ್ನು ಅಧಿಕಾರಿಗಳು ವಶಪಡಿಸಿಕೊಂಡರು. ಈ ಸಂಬಂಧ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎಂ.ಆರ್. ವಕೀಲರಿಂದಃ**

ನನ್ನನ್ನು ವಿಡಿಯೋ ಗ್ರಾಫರ್ ಆಗಿ ನೇಮಕ ಮಾಡಿದ ಬಗ್ಗೆ ಯಾವುದೇ ಆದೇಶದ ಪ್ರತಿಯನ್ನು ಕೊಟ್ಟಿರುವುದಿಲ್ಲ ಆದರೆ ಗುರುತಿನ ಚೀಟಿ ಕೊಟ್ಟಿದ್ದರು. ನಾನು ಬಂಗಾರಪೇಟೆ ಟೌನ್‌ನಲ್ಲಿ ಚಾಸಾ-1 ರವರ ಜೊತೆ ಇದ್ದೆ. ಆಗ ಅವರು ಬೀರಾಂಡಹಳ್ಳಿ

ಕ್ರಾಸ್ ಬಳಿ ಹೋಗಲು ಬರುವಂತೆ ತಿಳಿಸಿದರು. ಈ ಮಾಹಿತಿ ಬಂದಾಗ ಸಂಜೆ 4.00 ಗಂಟೆಯಾಗಿತ್ತು. ನನಗೆ ಕಂಪ್ಯೂಟರ್ ಆಪರೇಟ್ ಮಾಡುವುದು ಬರುವುದಿಲ್ಲ. ನಾನು ವಿಡಿಯೋ ಕ್ಯಾಸೆಟ್ ರೆಕಾರ್ಡ ಮಾಡಿರುತ್ತೇನೆ. ಸದರಿ ಕ್ಯಾಸೆಟ್ ನ್ನು ಮಾಲೀಕರಾದ ಅರುಣ್ ಕುಮಾರ್ ರವರಿಗೆ ಕೊಟ್ಟಿರುತ್ತೇನೆ. ನಾನು ಸಿ.ಡಿ.ಯನ್ನು ಕಂಪ್ಯೂಟರ್ ಗೆ ಹಾಕಿ ವೀಕ್ಷಣೆ ಮಾಡಿರುವುದಿಲ್ಲ. ನಿಪಿ-11ನ್ನು ನಮ್ಮ ಮಾಲೀಕರು ತಯಾರಿಸಿರಬಹುದು. ನಾನು ಸಿ.ಡಿ.ಯನ್ನು ಮಾಡಿರುವುದಿಲ್ಲ. ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ಪೋಲೀಸರು ಸಹಿ ಮಾಡುವಂತೆ ತಿಳಿಸಿರುವಂತೆ ನಿಪಿ-2 ಮತ್ತು 5ರ ದಾಖಲಾತಿಗಳಿಗೆ ಸಹಿ ಮಾಡಿರುತ್ತೇನೆ. ಅವುಗಳಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ ಹೇ ಕೇ ಸರಿ ಇದೆ.

**(ಕೇಶವಮೂರ್ತಿ.ಬಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಂಗಾರಪೇಟೆ